ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

**ದಿಃ19-11-2025**

**ಮುಂದುವರೆದ ಪಾಟೀ ಸವಾಲುಃವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ವಾದಿಯರು ಈ ದಾವೆಯನ್ನು ಕರಾರು ಪತ್ರದ ಗುರಿತು ದಾವೆ ಹೂಡಿರುತ್ತಾರೆ. ನನ್ನ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ದಾವ ಆಸ್ತಿ ನನ್ನದೇ ಆಗಿರುತ್ತದೆ ಎಂದರೆ ಸರಿ. ದಾವ ಆಸ್ತಿಗೆ ಸಂಬಂಧಪಟ್ಟಂತೆ ನಾನು ವಾದಿಯರ ತಂದೆಯ ಬಳಿ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಎರಡೂವರೆ ಲಕ್ಷ ರೂ ಗೆ ದಾವ ಆಸ್ತಿಯನ್ನು ಮಾರಾಟ ಮಾಡುವುದಾಗಿ ಒಪ್ಪಂದ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಕರಾರು ಪತ್ರದಂತೆ ನಾನು ಒಂದು ಲಕ್ಷ ಮುಂಗಡ ಹಣ ಪಡೆದಿರುತ್ತೇನೆ ಎಂದರೆ ಸರಿ. ಉಳಿದ ಹಣವನ್ನು ಪೋಡ್ ಮಾಡಿದ ನಂತರ ಕ್ರಯ ಪತ್ರ ಮಾಡುವ ಸಮಯದಲ್ಲಿ ಕೊಡುವುದಾಗಿ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3 ತಿಂಗಳ ಒಳಗೆ ಅವರು ಪೋಡ ಮಾಡಿಸುತ್ತೇನೆ ಎಂದು ಹೇಳಿ ಆನಂತರ ಅವರು 3 ತಿಂಗಳು ಪುನಃ ಕಾಲಾವಕಾಶ ಪಡೆಕುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನಿ ಪಿ 1 ಕರಾರು ಪತ್ರ ಪಿತಾಂಬರ್ ಚಾರ್ ವಕೀಲರ ಬಳಿ ತಯಾರು ಮಾಡಿಸಿರುತ್ತೇವೆ ಎಂದರೆ ಸರಿ. ಅದನ್ನು ಅವರೇ ಬರವಣಿಗೆ ಮಾಡಿರುತ್ತಾರೆ ಎಂದರೆ ಸರಿ. ಕರಾರು ಪತ್ರಕ್ಕೆ ವಾದಿಯರ ತಂದೆ ಶ್ರೀಧರ್ ಮತ್ತು ನಾನು ಸಹಿ ಮಾಡಿರುತ್ತೇವೆ ಎಂದರೆ ಸರಿ. ಕರಾರು ಪತ್ರ ಆದ ನಂತರ ಕಂದಾಯ ಇಲಾಖೆಗೆ ಪೋಡ್ ಮಾಡಲು ಅರ್ಜಿ ನೀಡಿರುವುದಿಲ್ಲ. ಸಾಕ್ಷಿ ಅವರೇ ಅರ್ಜಿ ನೀಡುವುದಾಗಿ ತಿಳಿಸಿದರು ಎಂದು ನುಡಿಯುತ್ತಾರೆ. ದಾವ ಆಸ್ತಿಯ ಸರ್ವೆಗಾಗಿ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ವಿಸ್ತೀರ್ಣದಲ್ಲಿ ವ್ಯತ್ಯಾಸ ಇರುವುದರಿಂದ ಅದನ್ನು ಸರಿಪಡಿಸಿ ಪೋಡ್ ಮಾಡುವುದಾಗಿ ಅಧಿಕಾರಿಗಳು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ವಿಸ್ತೀರ್ಣ ಸರಿಪಡಿಸಿ ಪೋಡ ಮಾಡಿಕೊಡಿ ಎಂದು ಕೇಳಿದಾಗ ನಾನು ಪೋಡ್ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 28.08.2020 ರಂದು ವಾದಿಯರು ವಕೀಲರ ಮೂಲಕ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿ. ಬಾಕಿ ಹಣ ಪಡೆದು ಪೋಡ್ ಮಾಡಿಸಿ ನೋಂದಾಯಿತ ಕ್ರಯ ಪತ್ರ ಮಾಡಿಕೊಡುವಂತೆ ನೋಟೀಸ್ ನೀಡಿದ್ದರು ಎಂದರೆ ಸರಿ. ನಾನು ಪ್ರತ್ಯುತ್ತರ ನೀಡಿರುತ್ತೇನೆ. ವಾದಿಯರು ಪೋಡ ಮಾಡಿಸದೇ ಕಾಲಹರಣ ಮಾಡಿರುತ್ತಾರೆ. ಆದ್ದರಿಂದ ಕ್ರಯ ಪತ್ರ ಮಾಡಿಸಿರುವುದಿಲ್ಲ ಎಂದು ಸುಳ್ಳು ಅಂಶ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಂಗಡ ಹಣವನ್ನು ವಾಪಸ್ಸು ನೀಡುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ

ಸರಿಯಲ್ಲ. ದಿಃ 28.10.2020 ರಂದು ವಾದಿಯರು ಪ್ರತ್ಯುತ್ತರಕ್ಕೆ ಉತ್ತರ ನೋಟೀಸ ನೀಡಿರುತ್ತಾರೆ ಎಂದರೆ ಸರಿ. ಅದರಲ್ಲಿ ನಮೂದಿಸಿರುವ ಅಂಶಗಳು ಗೊತ್ತಿರುತ್ತದೆ. ನೋಟೀಸ್ ನಲ್ಲಿ ಆಕಾರ ಬಂದ್ ಮತ್ತು ಪಹಣಿಯಲ್ಲಿ ವಿಸ್ತೀರ್ಣ ದ ವ್ಯತ್ಯಾಸ ಇರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಪಹಣಿಯಲ್ಲಿ ನನಗೆ 4 ಎಕರೆ 31 ಗುಂಟೆ ಇರುತ್ತದೆ. ಸಾಕ್ಷಿ ಮುಂದುವರೆದು ನನಗೆ 4 ಎಕರೆ 14 ಗುಂಟೆ ಮಾತ್ರ ಇದೆ ಎಂದು ನುಡಿಯುತ್ತಾರೆ. ಉಳಿದ ವಿಸ್ತೀರ್ಣ ಖರಾಬಿ ಮಾಡಬೇಕೆಂದು ಹೇಳಿ ಸರ್ವೆ ಕಚೇರಿಯಲ್ಲಿ ಇರುತ್ತದೆ ಅದನ್ನು ನಾನು ಮಾಡಲು ಆಗಿರುವುದಿಲ್ಲ. ವಿಸ್ತೀರ್ಣ ದಲ್ಲಿ ವ್ಯತ್ಯಾಸ ಇರುವುದು ನನ್ನ ಗಮನಕ್ಕೆ ಇದೆ ಎಂದರೆ ಸರಿ. ಆಕಾರ್ ಬಂದ ನಲ್ಲಿ 5 ಎಕರೆ 32 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿ. 1 ಎಕರೆ 1 ಗುಂಟೆ ವ್ಯತ್ಯಾಸ ಇರುವುದರಿಂದ ಅದನ್ನು ತಿದ್ದುಪಡಿ ಮಾಡದೇ ಪೋಡ್ ಮಾಡಲು ಆಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರ ಮಾಡಲು ಯಾವುದೇ ತೊಂದರೆ ಇಲ್ಲದಿದ್ದರೂ ವಾದಿಯರು ಕಾಲಹರಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಅಳತೆಯಲ್ಲಿ ವ್ಯತ್ಯಾಸ ಇದ್ದರೂ ಸಹ ಅದನ್ನು ನಾನು ಸರಿಪಡಿಸದೇ ಕ್ರಯಪತ್ರ ಮಾಡಲು ಮುಂದೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅಳತೆಯನ್ನು ಸರಿ ಮಾಡಿದಾಗ ನಾನು ಕ್ರಯಪತ್ರ ಮಾಡಿಕೊಡಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ವಾದಿಯರು ಕಾಲಹರಣ ಮಾಡಿದ್ದರಿಂದ ನಾನು ಈಗ ಕ್ರಯ ಪತ್ರ ಮಾಡಿಕೊಡುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ಯಾವುದೇ ಕಾಲಹರಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಅಳತೆ ಸರಿ ಮಾಡಿಕೊಡಿ ಎಂದು ಕೇಳಿದ್ದರೂ ನಾನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆಯಿಂದ ಹಣವನ್ನು ಚೆಕ್ ಮೂಲಕ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಹಣವನ್ನು ವಾದಿಗೆ ವಾಪಸ್ಸು ಕೊಡಲು ಬದ್ದನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಸರಿ ಮಾಡಿ ಕೊಡದೇ ವಾದಿಯರ ಹಣವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**